ಓಎಸ್ 67/2020

ಪಿಡಬ್ಲ್ಯೂ-1

ದಿ: **14.06.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲು: ಶ್ರೀ ಹೆಚ್.ವಿ.ಆರ್ ವಕೀಲರಿಂದ**

ನನ್ನ ಆಸ್ತಿಯ ಅಸೆಸ್ ಮೆಂಟ್ ನಂಬರ್ ಗೊತ್ತಿಲ್ಲ. ನಾನು ವಿದ್ಯಾಭ್ಯಾಸ ಮಾಡಿಲ್ಲ. ಆಸ್ತಿಯ ಅಳತೆಯೂ ಸಹಾ ಗೊತ್ತಿಲ್ಲ. ದಾವಾ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿ ಖಾತೆ ಇದೆ. ನಾನು ದಾವಾ ಆಸ್ತಿಯ ಖಾತಾ ನಕಲನ್ನು ಕೊಟ್ಟಿದ್ದೇನೆ. ದಾವಾ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿ ಇದೆ. ನನ್ನ ತಂದೆಯ ಹೆಸರಿನಲ್ಲಿರುವ ದಾವಾ ಆಸ್ತಿಯ ಅಸೆಸ್ ಮೆಂಟನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ನಾವು ಒಟ್ಟು 5 ಜನ ಮಕ್ಕಳು. ನನ್ನ

ಓಎಸ್ 67/2020

ಪಿಡಬ್ಲ್ಯೂ-1

ತಾಯಿ ಕೂಡ ತೀರಿಕೊಂಡಿರುತ್ತಾರೆ. ನಮ್ಮ ಅಣ್ಣ – ತಮ್ಮಂದಿರ ಮಧ್ಯೆ ವಿಭಾಗವಾಗಿಲ್ಲ, ಒಟ್ಟಿಗೆ ಇದ್ದೇವೆ. ಮಹದೇವೇಗೌಡ ನನ್ನ ತಮ್ಮ. ಮತ್ತೊಬ್ಬರು ಮಾಷ್ಟರು ಶಿವಣ್ಣ. ಮತ್ತೊಬ್ಬರು ನಾಗೇಶ್, ಉಡುಪಿಯಲ್ಲಿದ್ದಾರೆ. ಅವರನ್ನು ಈ ದಾವಾದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಾವು 4 ಜನ ಮಕ್ಕಳು ಎಂಬ ಬಗ್ಗೆ ವಂಶವೃಕ್ಷ ಮನೆಯಲ್ಲಿ ಇದೆ. ಯಾವುದೇ ಮನೆಯನ್ನು ಭಾಗ ಮಾಡಿಕೊಂಡಿಲ್ಲ.

ದಾವಾ ಆಸ್ತಿಯು ನನ್ನ ತಾತ ಸಿದ್ದೇಗೌಡರಿಗೆ ಸೇರಿದ್ದು ಅದನ್ನು ಮೂರು ಜನರಿಗೆ ಭಾಗ ಮಾಡಿದ್ದಾರೆ. ನನ್ನ ತಾತನಿಗೆ ಒಟ್ಟು ಮೂರು ಜನ ಮಕ್ಕಳು. ದಾವಾ ಆಸ್ತಿಯು ಮೂಲತಃ ನನ್ನ ತಂದೆಗೆ ಸೇರಿದ್ದಾಗಿರುತ್ತದೆ. ಆಸ್ತಿಯು ಮೂಲತಃ ಪಿತ್ರಾರ್ಜಿತವಾಗಿ ಬಂದಿದೆಯೋ, ಇಲ್ಲವೋ ಗೊತ್ತಿಲ್ಲ. ನನ್ನ ತಂದೆ ನನ್ನ ಚಿಕ್ಕಪ್ಪ ನಿಂದ ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದಿರುತ್ತಾರೆ. ನಮ್ಮ ತಾತ ನನ್ನ ಚಿಕ್ಕಪ್ಪ ಮತ್ತು ನನ್ನ ತಂದೆಗೆ ಮತ್ತು ಇನ್ನೊಬ್ಬರಿಗೆ ಮೂರು ಭಾಗ ಕೊಟ್ಟಿದ್ದರು, ಆನಂತರ ನಮ್ಮ ಚಿಕ್ಕಪ್ಪ ಸಿದ್ದೇಗೌಡ ನಮ್ಮ ತಂದೆಗೆ ಮಾರಾಟ ಮಾಡಿರುತ್ತಾರೆ. ನಮ್ಮ ಚಿಕ್ಕಪ್ಪ ಸಿದ್ದೇಗೌಡರಿಗೆ ನಮ್ಮ ತಾತನಿಂದ ಎಷ್ಟು ಅಳತೆಯ ಆಸ್ತಿ ಬಂದಿತ್ತು ಎಂದು ಗೊತ್ತಿಲ್ಲ. ನಮ್ಮ ಚಿಕ್ಕಪ್ಪ ನಮ್ಮ ತಂದೆಗೆ ಕ್ರಯಕ್ಕೆ ಕೊಡುವ ಮೊದಲು ನಮ್ಮ ಚಿಕ್ಕಪ್ಪನಿಗೆ ಎಷ್ಟು ಅಳತೆಯ ಖಾತೆಯಾಗಿತ್ತು ಎಂದು ಗೊತ್ತಿಲ್ಲ. ನಮ್ಮ ತಂದೆಯವರಿಗೆ ತೆರಕಣಾಂಬಿ ಗ್ರಾಮ ಪಂಚಾಯಿತಿಯಲ್ಲಿ ಖಾತೆಯಾಗಿದೆ ಎಂಬ ಬಗ್ಗೆ ಖಚಿತಪಡಿಸಿಕೊಂಡಿರುತ್ತೇನೆ. ಖಾತೆಯು 2ನೇ ವಾದಿಯ ಹೆಸರಿಗೆ ಆಗಿರುತ್ತದೆ. ಮಹದೇವೇಗೌಡ ಬಿನ್ ಮಲ್ಲೇಗೌಡ ಎಂದರೆ ನನ್ನ ತಮ್ಮ. ನಮ್ಮ ತಂದೆ ತೀರಿಕೊಂಡು 8 ವರ್ಷಗಳಾಗಿದೆ. ನಿಪಿ 2 ಮಾದೇಗೌಡ ಬಿನ್ ಮಲ್ಲೇಗೌಡ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಮಾದೇಗೌಡ ಎಂಬುವವರು ಯಾರೂ ಇಲ್ಲ.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ

ಓಎಸ್ 67/2020

ಪಿಡಬ್ಲ್ಯೂ–1